# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ–591156

## 61ನೇ ಸಿಂಡಿಕೇಟ್ ಸಾಮಾನ್ಯ ಸಭೆ ಹಾಗೂ 2020ನೇ ಸಾಲಿನ 1ನೇ ಸಭೆಯ ನಡಾವಳಿಗಳು

ದಿನಾಂಕ : ಗುರುವಾರ, 16–01–2020

ಸಮಯ : ಬೆಳಗ್ಗೆ 11: 30 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ,
ರಾ.ಚ.ವಿ., ಬೆಳಗಾವಿ

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 61ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2020ನೇ ಸಾಲಿನ 01ನೇ ಸಭೆಯನ್ನು ಗುರುವಾರ ದಿನಾಂಕ 16 ಜನವರಿ 2020 ರಂದು ಬೆಳಗ್ಗೆ 11.30 ಘಂಟೆಗೆ ನಡೆದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಎಂ. ರಾಮಚಂದ್ರಗೌಡ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಕೆ.ಬಿ.ಚಂದ್ರಿಕಾ | ಸದಸ್ಯರು |
| 3. | ಶ್ರೀ ನರಸಿಂಹ ರಾಯಚೂರ | ಸದಸ್ಯರು |
| 4. | ಶ್ರೀ ಬಸವರಾಜ ಎನ್. ಚಿಕ್ಕನಗೌಡರ | ಸದಸ್ಯರು |
| 5. | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 6. | ಡಾ.(ಶ್ರೀಮತಿ) ಎಸ್.ಐ. ಮಡಿವಾಳಪ್ಪಾಗೋಳ | ಸದಸ್ಯರು |
| 7. | ಡಾ. ವ್ಹಿ.ಎಲ್. ಪೂಜಾರಿ | ಸದಸ್ಯರು |
| 8. | ಪ್ರೊ. ಜೆ.ಸಿ.ಚಿಟ್‌ಕೂರ | ಸದಸ್ಯರು |
| 9. | ಶ್ರೀ ಹನುಮಂತಪ್ಪ ಎಸ್. ಶಿಗ್ಗಾಂವ್ | ಸದಸ್ಯರು |
| 10. | ಡಾ. ಕೆ. ಶೇಷಮೂರ್ತಿ | ಸದಸ್ಯರು |
| 11. | ಕು. ಶೋಭಾ ಹೂಗಾರ್ | ಸದಸ್ಯರು |
| 12. | ಡಾ. ಆನಂದ್ ಹೊಸೂರ್ | ಸದಸ್ಯರು |
| 13. | ಶ್ರೀ ಅಶೋಕ ಕೆ. ಕಬ್ಬೇರ್ | ಸದಸ್ಯರು |
| 14. | ಶ್ರೀ. ಕಿರಣಕುಮಾರ್ ಡಿ. ದೇಸಾಯಿ | ಸದಸ್ಯರು |
| 15. | **ಪ್ರೊ. ಅಶೋಕ ಡಿ' ಸೋಜಾ(ಪ್ರಭಾರಿ)** | **ಕುಲಸಚಿವರು(ಮೌ) ಹಾಗೂ ಸದಸ್ಯರು** |
| 16. | **ಪ್ರೊ. ಬಸವರಾಜ ಪದ್ಮಶಾಲಿ** | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 4. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ 16 ಜನವರಿ 2020 ರಂದು ಜರುಗಿದ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡಾವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2)

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 03-01-2020

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 03-01-2020

ಪ್ರಸ್ತಾವನೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 61ನೇ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಹಾಗೂ ಪ್ರಾಧಿಕಾರದ ಸಭಾಧ್ಯಕ್ಷರಾದ ಪ್ರೊ. ಎಂ. ರಾಮಚಂದ್ರಗೌಡ ಇವರು ಸಭೆಗೆ ಆಗಮಿಸಿದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಗೆ ಹೊಸದಾಗಿ ಸರಕಾರದಿಂದ ನಾಮನಿರ್ದೇಶನಗೊಂಡ ಶ್ರೀ ಹನುಮಂತಪ್ಪ ಎಸ್. ಶಿಗ್ಗಾಂವ್, ಡಾ. ಕೆ. ಶೇಷಮೂರ್ತಿ, ಕು. ಶೋಭಾ ಹೂಗಾರ್, ಡಾ. ಆನಂದ ಹೊಸೂರ್, ಶ್ರೀ ಅಶೋಕ ಕೆ. ಕಬ್ಬೇರ್, ಶ್ರೀ. ಕಿರಣಕುಮಾರ್ ಡಿ. ದೇಸಾಯಿ ಹಾಗೂ ಡೀನ್ ಗುಂಪಿನಿಂದ ಜೇಷ್ಠತೆಗೆ ಅನುಸಾರವಾಗಿ ನಾಮನಿರ್ದೇಶನಗೊಂಡ ಪ್ರೊ. ಕೆ.ಬಿ.ಚಂದ್ರಿಕಾ ಇವರನ್ನು ಮಾನ್ಯ ಕುಲಪತಿಗಳು ಹೂ ಗುಚ್ಚ ನೀಡುವುದರ ಮೂಲಕ ಸ್ವಾಗತಿಸಿ ಎಲ್ಲ ಸದಸ್ಯರು ಪರಸ್ಪರ ಪರಿಚಯ ಮಾಡಿಕೊಂಡರು.

ಮಾನ್ಯ ಕುಲಪತಿಗಳು ಹೊಸದಾಗಿ ನಾಮನಿರ್ದೇಶನಗೊಂಡ ಸದಸ್ಯರುಗಳಿಗೆ ವಿಶ್ವವಿದ್ಯಾಲಯದ ಬಗ್ಗೆ ಪರಿಚಯ ಮಾಡಿಕೊಟ್ಟರು. ಕೇಂದ್ರ ಅರಣ್ಯ ಇಲಾಖೆಯು ಆಯೋಜಿಸಿದ್ದ ಎಫ್.ಎ.ಸಿ ಸಭೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬಗ್ಗೆ ಮೂರು ನಿರ್ಣಯಗಳನ್ನು ತಿಳಿಸಿರುತ್ತಾರೆ. ಸದರಿ ನಿರ್ಣಯದಲ್ಲಿ ಅರಣ್ಯ ಜಮೀನನ್ನು ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವುದು ಹಾಗೂ ವಿಶ್ವವಿದ್ಯಾಲಯವು ಅರಣ್ಯೇತರ ಜಮೀನನ್ನು ಅಥವಾ ಕಂದಾಯ ಜಮೀನಿನಲ್ಲಿ ಸ್ಥಳಾಂತರ ಹೊಂದಬೇಕೆಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆದ ಕಾರಣ ವಿಶ್ವವಿದ್ಯಾಲಯವು ಬೆಳಗಾವಿ ತಾಲೂಕಿನ ಹಿರೆಬಾಗೇವಾಡಿ ಹಾಗೂ ಹಲಗಿಮರ್ಡಿ ಗ್ರಾಮಗಳಲ್ಲಿ ಲಭ್ಯವಿರುವ ಸರ್ಕಾರಿ ಜಮೀನುಗಳು 127.07 ಎಕರೆ ಮಂಜೂರು ಮಾಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮುಂದುವರೆದು, ಸದರಿ ಸರ್ಕಾರಿ ಜಮೀನಿಗೆ ಹೊಂದಿಕೊಂಡ ಹಿರೆಬಾಗೇವಾಡಿಯ ಖಾಸಗಿ ಜಮೀನಿನ ರೈತರು ಸ್ವಇಚ್ಛೆಯಿಂದ ಸರ್ಕಾರ ನಿಗದಿಪಡಿಸಿದ ದರದಲ್ಲಿ ಜಮೀನನ್ನು ವಿಶ್ವವಿದ್ಯಾಲಯಕ್ಕೆ ನೀಡಲು ಅರ್ಜಿಯನ್ನು ತಮ್ಮ ಸಹಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಈ ಎರಡು ಪ್ರಸ್ತಾವನೆಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು ಮುಂದಿನ ಕ್ರಮಕ್ಕಾಗಿ ಹಾಗೂ ಜಮೀನಿನ ಮಂಜೂರಾತಿಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ತದನಂತರ, ವಿಶ್ವವಿದ್ಯಾಲಯದ ಆದಾಯ ತೆರಿಗೆ ಬಗ್ಗೆ ಮಾಹಿತಿ ನೀಡುತ್ತಾ, ಆದಾಯ ತೆರಿಗೆ ಸಂದಾಯ ಮಾಡುವ ವಿಷಯದ ಮಾಹಿತಿ ನೀಡುವ ಕುರಿತಂತೆ ಉಚ್ಚ ನ್ಯಾಯಾಲಯದ ವಕೀಲರು ಹಾಗೂ ವಿಶ್ವವಿದ್ಯಾಲಯದ Tax Retainerಆದ ಶ್ರೀ. ಬಿ.ಎಸ್.ಎನ್. ಪ್ರಸಾದ ಇವರನ್ನು ವಿಶೇಷ ಆಹ್ವಾನಿತರೆಂದು ಸಭೆಗೆ ಆಮಂತ್ರಿಸಿ, 2017-18ನೇ ಸಾಲಿನ ವಿಶ್ವವಿದ್ಯಾಲಯದ ಆದಾಯ ತೆರಿಗೆ ಅಂದಾಜು ರೂ. 16.00 ಕೋಟಿಗಳನ್ನು ಸಂದಾಯ ಮಾಡಬೇಕಾಗುತ್ತದೆ ಎಂದು ಶ್ರೀ.ಬಿ.ಎಸ್.ಎನ್. ಪ್ರಸಾದ ಇವರು ತಿಳಿಸಿರುತ್ತಾರೆ. ಆದಾಯ ತೆರಿಗೆಯ ವಿಷಯಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಅಧಿಕಾರಿಗಳೊಂದಿಗೆ ವಿಶ್ವವಿದ್ಯಾಲಯದ ಕುರಿತು ಸಮಾಲೋಚನೆ ನಡೆಸಿ ಆದಷ್ಟು ಕಡಿಮೆ ಮಾಡಿಸಿ ಕೊಡುವ ಭರವಸೆಯನ್ನು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಈ ಆದಾಯ ತೆರಿಗೆ ನೀಡಿದ ನಂತರ, ಹಿಂದಿನ ಸಾಲಿನ ಅಂದರೆ 2013-14ನೇ ಸಾಲಿನಿಂದ 2018-19 ನೇ ಸಾಲಿನವರೆಗೂ

ವಿಶ್ವವಿದ್ಯಾಲಯವು ಸಂದಾಯ ಮಾಡಬೇಕಾದ ತೆರಿಗೆಯ ಮೊತ್ತ ಹಾಗೂ ಇನ್ನಿತ್ತರ ವೆಚ್ಚ ಸೇರಿ ಅಂದಾಜು ರೂ. 145.00 ಕೋಟಿಗಳಾಗಬಹುದು ಅದನ್ನು ಕೂಡಾ ಕಟ್ಟದಿರುವ ಹಾಗೆ ಮಾಡುವೆನೆಂದು ಭರವಸೆಯನ್ನು ವಿಶ್ವವಿದ್ಯಾಲಯಕ್ಕೆ ನೀಡಿದ್ದಾರೆ ಎಂದು ತಿಳಿಸಿದರು. ಈ ವಿಷಯದ ಕುರಿತು ಸರ್ಕಾರದ ನಿರ್ದೇಶನ ಬಯಸಿ ಪತ್ರ ಬರೆಯಲಾಗಿದೆ ಎಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳನ್ನೊಳಗಂಡಂತೆ ಸುಮಾರು 385 ಮಹಾವಿದ್ಯಾಲಯವನ್ನು ಹೊಂದಿದ್ದು, ರಾಜ್ಯದಲ್ಲಿಯೇ ಅತ್ಯಂತ ದೊಡ್ಡ ವಿಶ್ವವಿದ್ಯಾಲಯ ಎಂಬ ಹೆಮ್ಮೆಗೆ ಪಾತ್ರವಾಗಿದೆ. ವಿಶ್ವವಿದ್ಯಾಲಯವು ಪ್ರಾರಂಭದಿಂದ ಇಲ್ಲಿಯವರೆಗೆ ಅನೇಕ ಶೈಕ್ಷಣಿಕ ಸುಧಾರಣೆಗಳನ್ನು ತಂದಿದೆ. ಅವುಗಳಲ್ಲಿ ಪ್ರಮುಖವಾಗಿ ಪರೀಕ್ಷೆಗಳ ಆಯೋಜನೆ ಹಾಗೂ ಮೌಲ್ಯಮಾಪನ ಕಾರ್ಯಗಳಲ್ಲಿ ತಂದಿರುವ ಬದಲಾವಣೆಗಳೂ ಸೇರಿವೆ.

ಮಾನ್ಯ ಕುಲಪತಿಗಳ, ಕುಲಸಚಿವರ, ಪರೀಕ್ಷಾ ಮಂಡಳಿಗಳ, ಅನೇಕ ವಿಷಯ ತಜ್ಞರುಗಳ ಅಭಿಪ್ರಾಯಗಳನ್ನು ಆಧರಿಸಿ ಪರೀಕ್ಷಾ ಸಂದರ್ಭಗಳಲ್ಲಿ ಆಗುವ ನ್ಯೂನತೆಗಳನ್ನು ಹಾಗೂ ನಕಲು ಪ್ರಕರಣಗಳನ್ನು ಹೋಗಲಾಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸ್ನಾತಕ ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ನಡೆಸಲು 12 ವಿಚಕ್ಷಕ ತಂಡಗಳನ್ನು ಜಿಲ್ಲಾವಾರು ನಿಯೋಜಿಸಲಾಗಿತ್ತು. ಆದರೂ ಪರೀಕ್ಷಾ ಅಕ್ರಮಗಳ ಕುರಿತು ದೂರವಾಣಿ ಹಾಗೂ ಮಾಧ್ಯಮಗಳ ವರದಿಯನುಸಾರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯೊಂದಿಗೆ ಪರೀಕ್ಷಾ ಕೇಂದ್ರಗಳಿಗೆ ಮಾನ್ಯ ಕುಲಪತಿಗಳು ಭೇಟಿ ನೀಡಿದ್ದರು ಹಾಗೂ ವಿಶೇಷ ವಿಚಕ್ಷಕ ತಂಡಗಳನ್ನು ರಚಿಸಿದ್ದರು. ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮಗಳು ಕಂಡುಬಂದಿರುವ ಪ್ರಯುಕ್ತ ಅಂತಹ ಪರೀಕ್ಷಾ ಕೇಂದ್ರಗಳನ್ನು ರದ್ದುಗೊಳಿಸಿ, ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಸಮೀಪದ ಪರೀಕ್ಷಾ ಕೇಂದ್ರಗಳಿಗೆ ಜೋಡಣೆ ಮಾಡಿ, ಸೂಕ್ತ ವ್ಯವಸ್ಥೆಗಳೊಂದಿಗೆ ಪರೀಕ್ಷೆಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರಿಗೆ ತಿಳಿಸಲಾಯಿತು. ಇನ್ನುಳಿದ ಪರೀಕ್ಷಾ ಕೇಂದ್ರಗಳಿಗೂ ಸಹ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ನಿಯೋಜಿಸಿಲಾಯಿತು.

2019–20 ನೇ ಸಾಲಿನ ಸ್ನಾತಕ ಪರೀಕ್ಷೆಗಳಲ್ಲಾದ ಪರೀಕ್ಷಾ ಅಕ್ರಮಗಳನ್ನು ಆಧರಿಸಿ ಎಲ್ಲಾ ಮಹಾವಿದ್ಯಾಲಯಗಳ, ಪ್ರಾಂಶುಪಾಲರುಗಳ, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರ ಹಾಗೂ ಪರೀಕ್ಷಾ ಮಂಡಳಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಸಭೆಯನ್ನು ಕರೆದು ಪರೀಕ್ಷಾ ಸುಧಾರಣೆಗಳ ಕುರಿತಾಗಿ ಚರ್ಚಿಸಲಾಯಿತು. ಸದರಿ ತೀರ್ಮಾನಗಳನ್ನು ಆಧರಿಸಿ, 2019 ರ ಡಿಸೆಂಬರ್ ಹಾಗೂ ಜನೇವರಿ–2020 ರಲ್ಲಿ ಜರುಗಿದ ಬಿ.ಎಡ್, ಬಿ.ಪಿ.ಎಡ್ ಹಾಗೂ ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಬೆಳಗಾವಿ, ಬಾಗಲಕೋಟ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಕ್ಲಸ್ಟರ್ ಮಾದರಿ ಪರೀಕ್ಷಾ ಕೇಂದ್ರಗಳನ್ನು ರಚಿಸಿ ಪರೀಕ್ಷೆಗಳನ್ನು ಜರುಗಿಸಲಾಯಿತು. ಪರೀಕ್ಷೆಗಳು ಮುಗಿದ ನಂತರ ಪರೀಕ್ಷಾ ವ್ಯವಸ್ಥೆಯಲ್ಲಾದ ಬದಲಾವಣೆಗಳ ಕುರಿತು ವಿಜಯಪುರ ಪರೀಕ್ಷಾ ಕೇಂದ್ರಗಳ ವಿದ್ಯಾರ್ಥಿಗಳಿಂದ ಅಭಿಪ್ರಾಯಗಳನ್ನು ಸ್ವೀಕರಿಸಲಾಯಿತು. ಎಲ್ಲ ವಿದ್ಯಾರ್ಥಿಗಳು ಅತ್ಯಂತ ಹೆಮ್ಮೆಯಿಂದ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ರೀತಿಯ ಪರೀಕ್ಷಾ ಕ್ರಮಗಳಿಂದಾಗಿ ನಮಗೆ ಓದಲು ಹಾಗೂ ಪರೀಕ್ಷಾ ಸಿದ್ಧತೆಗಳನ್ನು ಮಾಡಿಕೊಳ್ಳಲು ತುಂಬಾ ಅನುಕೂಲವಾಗುತ್ತದೆ ಎಂದು ಹೇಳಿದರು.

ಈ ಮೇಲಿನ ಅಭಿಪ್ರಾಯಗಳನ್ನು ಆಧರಿಸಿ ಪರೀಕ್ಷಾರ್ಥವಾಗಿ ಕೈಗೊಂಡ ಪರೀಕ್ಷಾ ಸುಧಾರಣಾ ಕ್ರಮಗಳನ್ನು ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಭಾರತ ಸರಕಾರದ ಹೊಸ ಶಿಕ್ಷಣ ನೀತಿಯನ್ನಾಧರಿಸಿ ಪರೀಕ್ಷಾ ಗುಣಮಟ್ಟ, ಮೌಲ್ಯಮಾಪನ ಹಾಗೂ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಕೌಶಲ್ಯಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಹೊಸ ಪರೀಕ್ಷಾ ಪರಿನಿಯಮ, ವಿನಿಯಮಗಳನ್ನು ರಚಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ ಅಳವಡಿಸಿಕೊಳ್ಳಬಹುದಾದ ತಾಂತ್ರಿಕ ದಾರಿ ನಕ್ಷೆಗಳನ್ನು ರೂಪಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗುವುದು ಎಂದು ಮಾನ್ಯ ಕುಲಪತಿಗಳು ತಿಳಿಸಿದರು. ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯವನ್ನು ಎಲ್ಲರು ಸೇರಿ ಬೆಳೆಸೋಣ ಎಂದರು.

ತದನಂತರ ಕುಲಸಚಿವರು ಮತ್ತೊಮ್ಮೆ ಸಭೆಯನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 61ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2020ನೇ ಸಾಲಿನ 01ನೇ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 16-01-2020 ರಂದು ಕೈಗೊಂಡ ತೀರ್ಮಾನಗಳು.**

| ಕ್ರ.ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2020/01/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| | ತೀರ್ಮಾನ | **ದಿನಾಂಕ 12-12-2019 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.** |
| 2 | 2020/01/02 | ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸಕ್ತ ಅಧ್ಯಾಪಕರುಗಳಿಗೆ ಸಣ್ಣ ಸಂಶೋಧನಾ ಯೋಜನೆ (Minor Research Project) ಅರ್ಜಿಯನ್ನು ಅಹ್ವಾನಿಸಲು ಅನುಮತಿ ನೀಡುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಸಕ್ತ ಅಧ್ಯಾಪಕರುಗಳಿಗೆ ಸಣ್ಣ ಸಂಶೋಧನಾ ಯೋಜನೆ (Minor Research Project) ಅರ್ಜಿಯನ್ನು ಆಹ್ವಾನಿಸಲು ಹಾಗೂ ಅರ್ಜಿ ಸ್ವೀಕರಿಸಿದ ನಂತರ ಅರ್ಜಿಗಳ ಪರಿಶೀಲನೆ ಕೈಗೊಳ್ಳಲು, ಪ್ರೊಜೆಕ್ಟ್ ಅವಧಿಯನ್ನು ನಿರ್ಧರಿಸಲು, ಷರತ್ತುಗಳನ್ನು ರಚಿಸಲು, ಸಮಿತಿ ರಚಿಸಲು ಅರ್ಜಿ ಅನುಮೋದನೆಗೊಂಡ ತರುವಾಯ ವಿಷಯಕ್ಕೆ ಅನುಗುಣವಾಗಿ Seed Money ಯನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಯವ್ಯಯ ದಿಂದ ಅಧ್ಯಾಪಕರುಗಳಿಗೆ ಸಂಶೋಧನಾ ಪ್ರೊಜೆಕ್ಟ್‌ಗಳನ್ನು ಕೈಗೊಳ್ಳಲು ಸಂದಾಯ ಮಾಡಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು ಹಾಗೂ ಸದರಿ ಅಧ್ಯಾಪಕರುಗಳು ಸಂಶೋಧನಾ ಪ್ರೊಜೆಕ್ಟ್‌ಗಳನ್ನು ಕೈಗೊಂಡ ವಿವರವನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಿಸಿತು.** |
| 3 | 2020/01/03 | ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ನಿರ್ದೇಶಕರು/ಅಧ್ಯಕ್ಷರು ನೇಮಕಾತಿಯನ್ನು ಅನುಸಮರ್ಥನೆ ನೀಡುವ ಕುರಿತು. |
| | ತೀರ್ಮಾನ | **ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಬಿಸಿನೆಸ್ ಮತ್ತು ಎಕನಾಮಿಕ್ಸಗಾಗಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ಹಾಗೂ ಸ್ಕೂಲ್ ಆಫ್ ಕ್ಲಾಸಿಕಲ್ ಕನ್ನಡ ಸ್ಟಡೀಸ್‌ಗಾಗಿ ಪ್ರೊ. ಎಸ್.ಎಮ್. ಗಂಗಾಧರಯ್ಯ ಇವರನ್ನು ನಿರ್ದೇಶಕರ ನೇಮಕಾತಿಗೆ ಅನುಸಮರ್ಥನೆ ನೀಡಿತು.** |
| 4 | 2020/01/04 | 2019-20ನೇ ಸಾಲಿನ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿ ಸರಕಾರದ ಅನುಮೋದನೆಗಾಗಿ ಸಲ್ಲಿಸಿದ ಕ್ರಿಯಾಯೋಜನೆಯ ಪ್ರಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಭೆಯ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **2019-20ನೇ ಸಾಲಿನ ಎಸ್‌ಸಿಪಿ ಯೋಜನೆಯಡಿ ಮಂಜೂರಾದ ರೂ. 14,00,000.00 ಗಳು ಹಾಗೂ ಟಿಎಸ್‌ಪಿ ಯೋಜನೆಯಡಿ ಮಂಜೂರಾದ ರೂ. 7,00,000.00 ಗಳನ್ನು ಸರಕಾರದಿಂದ ಈಗಾಗಲೇ ಮೂರು ಕಂತುಗಳಲ್ಲಿ ಬಿಡುಗಡೆಯಾಗಿದ್ದು, ಸರಕಾರದ ಪತ್ರದಲ್ಲಿ ಸೂಚಿಸಿರುವಂತೆ ರಾಜ್ಯ ಪರಿಷತ್ತಿನಲ್ಲಿ ಅನುಮೋದನೆಯಾದ ಕಾರ್ಯಕ್ರಮಗಳಿಗೆ ಕ್ರಿಯಾಯೋಜನೆಯನ್ನು ತಯಾರಿಸಿ ಸರಕಾರದ ಉನ್ನತ ಶಿಕ್ಷಣ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಸದರಿ ಎಸ್.ಸಿ.ಪಿ/ ಟಿ.ಎಸ್.ಪಿ. ಕ್ರಿಯಾಯೋಜನೆ ಹಾಗೂ ಸರಕಾರದ ಆದೇಶದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಭೆಯು ಅನುಮೋದನೆ ನೀಡಿತು.** |
| 5 | 2020/01/05 | 2018-19ನೇ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಖರ್ಚಾಗಿ ಬಾಕಿ ಉಳಿದ ಎಸ್.ಸಿ.ಪಿ./ಟಿ.ಎಸ್.ಪಿ. ಅನುದಾನವನ್ನು 2019-20ನೇ ಸಾಲಿಗೆ ಬಳಕೆ ಮಾಡಿಕೊಳ್ಳಲು ಕ್ರಿಯಾಯೋಜನೆಯನ್ನು ತಯಾರಿಸಿ ಸರಕಾರದ ಅನುಮೋದನೆಗೆ ಸಲ್ಲಿಸಲಾಗಿದ್ದು, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಭೆಯ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **2018-19ನೇ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಖರ್ಚಾಗಿ (ಬ್ಯಾಂಕ್ ಬಡ್ಡಿ ಮೊತ್ತವೂ ಸೇರಿ) ಎಸ್‌ಸಿಪಿ ಯೋಜನೆಯಡಿಯಲ್ಲಿ ರೂ. 25,60,000/-ಗಳು ಹಾಗೂ ಟಿಎಸ್‌ಪಿ ಯೋಜನೆಯಡಿ ರೂ. 34,43,000/-ಗಳು ಖರ್ಚಾಗದೇ ಬಾಕಿ ಉಳಿದಿದ್ದು, ಸದರಿ ಮೊತ್ತಕ್ಕೆ ಹಾಗೂ ಸರಕಾರದಿಂದ ಹೆಚ್ಚುವರಿಯಾಗಿ ಮಂಜೂರಾತಿ ಮಾಡಲು ಎಸ್‌ಸಿಪಿ ಯೋಜನೆಯಡಿಯಲ್ಲಿ ರೂ. 73,62,500/-ಗಳ ಕೋರಿಕೆಯೊಂದಿಗೆ ಕ್ರಿಯಾಯೋಜನೆಯನ್ನು ತಯಾರಿಸಿ ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಸದರಿ ಎಸ್.ಸಿ.ಪಿ/ಟಿ.ಎಸ್.ಪಿ. ಕ್ರಿಯಾಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |

<table>
<tr><td>6</td><td>2020/01/06</td><td>2020–21 ನೇ ಶೈಕ್ಷಣಿಕ ಸಾಲಿಗೆ ವಿವಿಧ ಬಗೆಯ ಸಂಯೋಜನೆಯನ್ನು ಪಡೆಯುವುದಕ್ಕಾಗಿ ಮಹಾವಿದ್ಯಾಲಯದವರು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲನೆಗಾಗಿ ಮಂಡಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>2020–21ನೇ ಶೈಕ್ಷಣಿಕ ಸಾಲಿಗೆ ವಿವಿಧ ಬಗೆಯ ಸಂಯೋಜನೆಯನ್ನು ಪಡೆಯುವುದಕ್ಕಾಗಿ ಮಹಾವಿದ್ಯಾಲಯದವರು ಸಲ್ಲಿಸಿದ ಅರ್ಜಿಗಳನ್ನು ಸಭೆಯು ಪರಿಶೀಲಿಸಿ, ಅನುಮೋದನೆ ನೀಡಿತು.
<table>
<tr><th rowspan="2">ಅ. ನಂ.</th><th rowspan="2" colspan="2">ಸಂಯೋಜನೆ ವಿಧ</th><th colspan="3">ಜಿಲ್ಲೆ</th><th rowspan="2">ಒಟ್ಟು</th></tr>
<tr><th>ಬೆಳಗಾವಿ</th><th>ಬಾಗಲಕೋಟ</th><th>ವಿಜಯಪುರ</th></tr>
<tr><td>01</td><td colspan="2">ಹೊಸ ಮಹಾವಿದ್ಯಾಲಯ</td><td>10</td><td>03</td><td>13</td><td>26</td></tr>
<tr><td>02</td><td colspan="2">ಹೊಸ ಸ್ನಾತಕ ಕೋರ್ಸ</td><td>02</td><td>01</td><td>10</td><td>13</td></tr>
<tr><td>03</td><td colspan="2">ಹೊಸ ಸ್ನಾತಕೋತ್ತರ ಕೋರ್ಸ</td><td>03</td><td>00</td><td>02</td><td>05</td></tr>
<tr><td>04</td><td colspan="2">ಹೊಸ ಭಾಷಾ/ಐಚ್ಚಿಕ ವಿಷಯಗಳು</td><td>12</td><td>03</td><td>05</td><td>20</td></tr>
<tr><td rowspan="2">05</td><td rowspan="2">ಸ್ನಾತಕೋತ್ತರ ಹಾಗೂ ವೃತ್ತಿಪರ ಸ್ನಾತಕ ಕೋರ್ಸಗಳ ಪ್ರವೇಶ ಮಿತಿ ಹೆಚ್ಚಳ</td><td>ವೃತ್ತಿಪರ ಸ್ನಾತಕ</td><td>02</td><td>02</td><td>01</td><td>05</td></tr>
<tr><td>ಸ್ನಾತಕೋತ್ತರ</td><td>01</td><td>01</td><td>01</td><td>03</td></tr>
<tr><td>06</td><td colspan="2">ಶಾಶ್ವತ ಸಂಯೋಜನೆ</td><td>01</td><td>01</td><td>00</td><td>02</td></tr>
<tr><td>07</td><td colspan="2">ಶಾಶ್ವತ ಸಂಯೋಜನೆ ಮುಂದುವರಿಕೆ</td><td>14</td><td>06</td><td>04</td><td>24</td></tr>
<tr><td>08</td><td colspan="2">ಮುಂದುವರಿಕೆ/ವಿಸ್ತರಣೆ/ಇತ್ಯಾದಿ</td><td>184</td><td>66</td><td>117</td><td>367</td></tr>
</table></td></tr>
<tr><td>7</td><td>2020/01/07</td><td>ಕು.ಮೋನಿಕಾ ಬಸವರಾಜ ಕಣ್ಣಿ ಶಿಕ್ಷಣ ಮಹಾವಿದ್ಯಾಲಯ ಇವರು ನಡೆಸುತ್ತಿರುವ ಮಹಾವಿದ್ಯಾಲಯದ ಜಾಗದ ಬಗ್ಗೆ ಇರುವ ಆಕ್ಷೇಪಣೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಸತ್ಯಶೋಧನಾ ಸಮಿತಿಯವರು ಪರಿಶೀಲನೆ ಮಾಡಿ ಸಲ್ಲಿಸಿರುವ ವರದಿಯನ್ನು ಸಭೆಯ ಮುಂದೆ ಮಂಡಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ಶ್ರೀ ಸಿದ್ದಲಿಂಗೇಶ್ವರ ವಿದ್ಯಾವರ್ಧಕ ಸಂಘದ ಕು.ಮೋನಿಕಾ ಬಸವರಾಜ ಕಣ್ಣಿ ಶಿಕ್ಷಣ ಮಹಾವಿದ್ಯಾಲಯ ಇವರು ನಡೆಸುತ್ತಿರುವ ಮಹಾವಿದ್ಯಾಲಯದ ಜಾಗದ ಬಗ್ಗೆ ಇರುವ ಆಕ್ಷೇಪಣೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಸತ್ಯಶೋಧನಾ ಸಮಿತಿಯವರು ಪರಿಶೀಲನೆ ಮಾಡಿ ಸಲ್ಲಿಸಿರುವ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಸಭೆಯು ಸಮಿತಿಯು ನೀಡಿರುವ ವರದಿಯ ಶಿಫಾರಸ್ಸುಗಳನ್ನು ಪೂರೈಸುವರೆಗು ಮುಂದಿನ ಶೈಕ್ಷಣಿಕ ವರ್ಷಕ್ಕಾಗಿ ಪ್ರವೇಶಾತಿಯನ್ನು ತೆಗೆದುಕೊಳ್ಳಬಾರದೆಂದು ಸೂಚಿಸಿತು ಹಾಗೂ ಸದರಿ ವಿಷಯವನ್ನು ತನಿಖಾ ಸಮಿತಿಯವರಿಗೆ ಸೂಚಿಸಲು ತಿಳಿಸಿತು.</td></tr>
<tr><td>8</td><td>2020/01/08</td><td>IMER, ಬೆಳಗಾವಿ ಮಹಾವಿದ್ಯಾಲಯಕ್ಕೆ 2020–21ನೇ ಸಾಲಿನಿಂದ ಸ್ವಾಯತ್ತತೆ ನೀಡುವ ಕುರಿತು.</td></tr>
<tr><td></td><td>ತೀರ್ಮಾನ</td><td>ಯು.ಜಿ.ಸಿ. ಇವರು ಸೂಚಿಸಿರುವಂತೆ ಕರ್ನಾಟಕ ಲಾ ಸೊಸೈಟಿಯ ಐ.ಎಂ.ಇ.ಆರ್. ಮಹಾವಿದ್ಯಾಲಯಕ್ಕೆ 2020–21 ರಿಂದ 2029–30 ನೇ ಶೈಕ್ಷಣಿಕ ಸಾಲಿನ ವರೆಗೆ ಹತ್ತು ವರ್ಷಗಳ ಅವಧಿಗೆ ಸ್ವಾಯತ್ತತೆ ಮಂಜೂರಾತಿಯನ್ನು ನೀಡಿರುವ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯು ಸದರಿ ಮಹಾವಿದ್ಯಾಲಯಕ್ಕೆ ಹತ್ತು ವರ್ಷಗಳ ಅವಧಿಗೆ ಸ್ವಾಯತ್ತತೆ ಮಂಜೂರಾತಿಯನ್ನು ನೀಡಿ ಅನುಮೋದನೆ ನೀಡಿತು.</td></tr>
<tr><td>9</td><td>2020/01/09</td><td>ವಿಶ್ವವಿದ್ಯಾಲಯದ ಆದಾಯ ತೆರಿಗೆ ಸಂದಾಯ ಮಾಡುವ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ವಿಶ್ವವಿದ್ಯಾಲಯದ ಆದಾಯ ತೆರಿಗೆ ಸಂದಾಯ ಮಾಡುವ ವಿಷಯದ ಕುರಿತು ಸದಸ್ಯರು ದೀರ್ಘ ಸಮಾಲೋಚನೆ ನಡೆಸಿ ಸರ್ಕಾರದ ನಿರ್ದೇಶನ ಬಯಸಿ ಪತ್ರ ಬರೆಯಲು ಸಭೆಯು ತೀರ್ಮಾನಿಸಿತು.</td></tr>
<tr><td>10</td><td>2020/01/10</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ವಿಜಯಪುರ ಆವರಣದಲ್ಲಿ ಒಳ ರಸ್ತೆಗಳ ನಿರ್ಮಾಣ ಮಾಡಲು ಅನುಮೋದನೆ ನೀಡುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ವಿಜಯಪುರ ಆವರಣದಲ್ಲಿ ಒಳ ರಸ್ತೆಗಳ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ, ವಿಜಯಪುರದ ಆವರಣದ ಜಾಗೆಯ ಲೇಔಟ ನಕ್ಷೆಯನ್ನು ವಿಶ್ವವಿದ್ಯಾಲಯದ EMPANELLED ARCHITECTURAL AND ENGINEERING CONSULTANTING NAVEEN CONSULTANTS, BENGALURU ಇವರು ತಯಾರಿಸಿದ್ದು, ಇಲ್ಲಿ ನಿರ್ವಹಿಸಬೇಕಾದ ಕಟ್ಟಡಗಳ ವಿಸ್ತೀರ್ಣ ಅದರಂತೆ ರಸ್ತೆಗಳ ವಿವರ ನಮೂದಿಸಿರುವದಿಲ್ಲ ರಸ್ತೆಗಳ ಅಗಲ, ಉದ್ದಳತೆ, ರಸ್ತೆ ನಿರ್ಮಾಣದ ವಿವರಣೆ ಇರುವದಿಲ್ಲ ಈ ಕೆಲಸಗಳನ್ನು ಕೈಗೊಳ್ಳಬೇಕಾಗಿದ್ದು  ಕೊಟ್ಟ ನಕ್ಷೆಗಳ ಪ್ರಕಾರ ಸದರಿ ರಸ್ತೆಗಳನ್ನು ನಿರ್ಮಾಣ ಮಾಡಬೇಕಾಗಿದ್ದು ರಸ್ತೆಗಳ ನಕ್ಷೆ ತಯಾರಿಸಲು ಮತ್ತು ಎಲ್ಲ ರಸ್ತೆಗಳ ನಿರ್ಮಾಣ ಸಲುವಾಗಿ Total Station Serveದ ಅವಶ್ಯಕತೆಯಿದ್ದು, ಅದನ್ನು ಖಾಸಗಿ ಸರ್ವೆದಾರರಿಂದ ನಿರ್ವಹಿಸಿ ಅದರಂತೆ ಮಣ್ಣಿನ ಅಗೆತ, ಏರಿ</td></tr>
</table>

| | | |
|---|---|---|
| | | ನಿರ್ಮಾಣ ಹಾಗೂ ಸಿ.ಡಿ. ಕ್ರಾಸ್ ಡ್ರೈನೇಜಗಳ ನಿರ್ಮಾಣ ಇವುಗಳನ್ನು ಒಳಗೊಂಡ ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದ್ದು ಇದರ ಅಂದಾಜು ಮೊತ್ತ ರೂ. 54.80 ಲಕ್ಷಗಳು ಆಗುತ್ತದೆ.<br>ಕೊಟ್ಟಲ್ಲಿ ವಿಜಯಪುರದ ಮಾನ್ಯ ಶಾಸಕರಾದ ಶ್ರೀ. ಬಸವನಗೌಡಾ ಪಾಟೀಲ ಯತ್ನಾಳ ಇವರು ಸ್ನಾತಕೋತ್ತರ ಕೇಂದ್ರ ವಿಜಯಪುರದ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಎರಡು ಚೆಕ್ ಡ್ಯಾಂ ನಿರ್ಮಿಸುವುದಕ್ಕಾಗಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಅನುದಾನವನ್ನು ಮಂಜೂರು ಮಾಡಿರುತ್ತಾರೆ. ಅದರಂತೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ ವಿಜಯಪುರದ ಆವರಣದಲ್ಲಿ ಒಳ ರಸ್ತೆಗಳ ನಿರ್ಮಾಣವನ್ನು ಮೇಲೆ ತಿಳಿಸಿದ ಅಂದಾಜು ಪತ್ರಿಕೆಯಂತೆ ಕೆಲಸ ನಿರ್ವಹಿಸಿ ಮಾನ್ಯ ಶಾಸಕರಾದ ಶ್ರೀ. ಬಸವನಗೌಡಾ ಪಾಟೀಲ ಯತ್ನಾಳ ಇವರು ರಸ್ತೆಯ ಡಾಂಬರೀಕರಣ ಕೆಲಸಕ್ಕಾಗಿ ರೂ.125 ಲಕ್ಷಗಳ ಅನುದಾನವನ್ನು ಸರ್ಕಾರದಿಂದ ಕೊಡಿಸುವದಾಗಿ ಭರವಸೆ ಕೊಟ್ಟಿರುತ್ತಾರೆ. ಆದ್ದರಿಂದ ಮೇಲೆ ತಿಳಿಸಿದ ಅಂದಾಜು ಪತ್ರಿಕೆಯಂತೆ ಮೂಲ ರಸ್ತೆಯ ಏರಿ ನಿರ್ಮಾಣ (Formation) ಕೆಲಸ ನಿರ್ವಹಿಸಲು ಸಭೆಯು ಅನುಮೋದನೆ ನೀಡಿತು ಹಾಗೂ ಈ ಕೆಲಸವನ್ನು ನಿರ್ವಹಿಸಲು ಭೂ ಸೇನಾ ನಿಗಮಕ್ಕೆ ವಹಿಸಲು ಸೂಚಿಸಿತು. ಶಾಸಕರು ವಿಶ್ವವಿದ್ಯಾಲಯಕ್ಕೆ ನೀಡಿದ ಸಹಾಯವನ್ನು ಸಿಂಡಿಕೇಟ್ ಸಭೆಯು ಪ್ರಶಂಸಿಸಿತು. |
| 11 | 2020/01/11 | ನಾಗಶಾಂತಿ ಶೈಕ್ಷಣಿಕ ಚಾರಿಟೆಬಲ್ ಟ್ರಸ್ಟ್ ರಾಣೆಬೆನ್ನೂರ ಇವರು ಆಯೋಜಿಸಿರುವ ಒಂದು ದಿನದ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದಿಂದ ಅನುದಾನ ನೀಡುವಂತೆ ವಿನಂತಿಸಿರುವ ಕುರಿತು. |
| | ತೀರ್ಮಾನ | ನಾಗಶಾಂತಿ ಶೈಕ್ಷಣಿಕ ಚಾರಿಟೆಬಲ್ ಟ್ರಸ್ಟ್ ರಾಣೆಬೆನ್ನೂರ ಇವರು ಆಯೋಜಿಸಿರುವ ಒಂದು ದಿನದ 'ಕರ್ನಾಟಕ ವೈಭವ' ಎಂಬ ವಿಷಯದ ಕುರಿತು ದಿನಾಂಕ: 17, 18, ಮತ್ತು 19, ಜನೇವರಿ 2020 ರಂದು ಒಟ್ಟು 03 ದಿನಗಳವರೆಗೆ ವಿಚಾರಣಾ ಸಂಕಿರಣವನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಕ್ರಮದ ಯಶಸ್ವಿಗಾಗಿ ವಿಶ್ವವಿದ್ಯಾಲಯದಿಂದ ಕನಿಷ್ಠ ಹತ್ತು ಲಕ್ಷ ರೂಪಾಯಿಗಳನ್ನು ಅನುದಾನವನ್ನು ನೀಡುವಂತೆ ವಿನಂತಿಸಿಕೊಂಡಿದರು. ಹಾಗೂ ಸರಕಾರದ ಅಧೀನ ಕಾರ್ಯದರ್ಶಿಗಳು ಸದರಿ ವಿಚಾರಣಾ ಸಂಕಿರಣ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದ ಹಂತದಲ್ಲಿಯೇ ಸೂಕ್ತ ತೀರ್ಮಾನ ತೆಗೆದುಕೊಂಡು ಅನುದಾನವನ್ನು ನೀಡುವಂತೆ ನಿರ್ದೇಶಿಸಿರುತ್ತಾರೆ. ಸದರಿ ನಿರ್ದೇಶನದಂತೆ, ವಿಶ್ವವಿದ್ಯಾಲಯವು ರೂ.5.00 ಲಕ್ಷಗಳನ್ನು ಅನುದಾನವನ್ನು ನೀಡಿರುತ್ತದೆ. ಸದರಿ ಕಾರ್ಯಕ್ರಮಕ್ಕೆ ರೂ.5.00 ಲಕ್ಷಗಳನ್ನು ಸಂದಾಯ ಮಾಡಿದ್ದಕ್ಕಾಗಿ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು. |
| 12 | 2020/01/12 | ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ಸಿ.ಎ.ಎಸ್ ಅಡಿಯಲ್ಲಿ 4 ರಿಂದ 5ನೇ ಹಂತಕ್ಕೆ ಪದೋನ್ನತಿಗಾಗಿ ಸಮಿತಿ ಸಭೆಯ ಶಿಫಾರಸ್ಸು ವರದಿಗಳನ್ನು ಪರಿಶೀಲನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | ಬೋಧಕ ಸಿಬ್ಬಂದಿಗಳ ಸಿ.ಎ.ಎಸ್ 4 ರಿಂದ 5, ಹಂತಕ್ಕೆ ಪದೋನ್ನತಿಗಾಗಿ ಸಿ.ಎ.ಎಸ್ ಸಮಿತಿ ಸಭೆಯ ಶಿಫಾರಸ್ಸಿನ ವರದಿಗಳಿಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |

| ಸಿ.ಎ.ಎಸ್ 4 ರಿಂದ 5 ಅಡಿಯಲ್ಲಿ | | |
|---|---|---|
| | ಶಿಕ್ಷಣ ವಿಭಾಗ | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ |
| 1 | ಡಾ. ಎಂ. ಸಿ. ಎರಿಸ್ವಾಮಿ | 1. ಡಾ. ವಿನಾಯಕ ಬಂಕಾಪುರ |
| 2 | ಡಾ. ಪೂರ್ಣಿಮಾ ಪಟ್ಟಣಶೆಟ್ಟಿ | |
| | | |
| | ರಸಾಯನಶಾಸ್ತ್ರ ವಿಭಾಗ | |
| 1 | ಡಾ. ಕಾಂತರಾಜು ಕಾಮಣ್ಣ | |
| 2 | ಡಾ. ಜೆ. ಮಂಜಣ್ಣ | |

| ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ಚರ್ಚಿಸುವ ವಿಷಯಗಳು. | | |
|---|---|---|
| I | 2020/01/I | ಅಂದಾಜು ಪತ್ರಿಕೆಯ ತಾಂತ್ರಿಕ ಮಂಜೂರಾತಿಯ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರ ಅಧಿಕಾರವನ್ನು ರೂ.5 ಲಕ್ಷದಿಂದ 10 ಲಕ್ಷ ರೂ. ಗಳಿಗೆ ಹೆಚ್ಚಿಸುವ ಕುರಿತು. |
| | ತೀರ್ಮಾನ | ಸರಕಾರದ ಆದೇಶದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅಂದಾಜು ಪತ್ರಿಕೆಯ ತಾಂತ್ರಿಕ ಮಂಜೂರಾತಿಯನ್ನು ರೂ.5 ಲಕ್ಷದಿಂದ ರೂ.10 ಲಕ್ಷ ಗಳಿಗೆ ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು. |
| II | 2020/01/II | ಪಂಡಿತ ದೀನ ದಯಾಳ ಉಪಾಧ್ಯಯ ಪೀಠ ಮೌಲ್ಯಮಾಪನ ಸಮಿತಿಯ ವರದಿ ಬಗ್ಗೆ ಚರ್ಚಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಂಡಿತ ದೀನ ದಯಾಳ ಉಪಾಧ್ಯಯ ಪೀಠ ಮೌಲ್ಯಮಾಪನ ಸಮಿತಿ ಸಭೆಯ ವರದಿಗಳನ್ನು ಸಭೆಯು ಪರಿಶೀಲಿಸಿ, ಮುಂದಿನ ಕ್ರಮಕೈಕೊಳ್ಳಲು ಅನುಮೋದನೆ ನೀಡಿತು ಹಾಗೂ ಪಂಡಿತ ದೀನ ದಯಾಳ ಉಪಾಧ್ಯಯ ಪೀಠದ ಮೌಲ್ಯಮಾಪನ ಸಮಿತಿಯನ್ನು ಪುನರ್ ರಚಿಸುವಂತೆ ಸೂಚಿಸಿತು. |

| | | |
|---|---|---|
| III | 2020/01/III | ಹಿಟ್ಟನಳ್ಳಿ ಎಲ್.ಟಿ.ಯ ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘದ, ಶ್ರೀ ಘೂಲಸಿಂಗ ನಾರಾಯಣ ಚವ್ಹಾಣ ಶಿಕ್ಷಣ ಮಹಾವಿದ್ಯಾಲಯದ ಸ್ಥಳವನ್ನು ವಿಶ್ವವಿದ್ಯಾಲಯದ ಅನುಮತಿ ಇಲ್ಲದೆ ಸ್ಥಳಾಂತರಗೊಳಿಸಿರುವ ಬಗ್ಗೆ ಚರ್ಚಿಸುವ ಕುರಿತು. |
| | ತೀರ್ಮಾನ | ಹಿಟ್ಟನಳ್ಳಿ ಎಲ್.ಟಿ.ಯ ಶ್ರೀ ಜಗದಂಬಾ ವಿದ್ಯಾವರ್ಧಕ ಸಂಘದ, ಶ್ರೀ ಘೂಲಸಿಂಗ ನಾರಾಯಣ ಚವ್ಹಾಣ ಶಿಕ್ಷಣ ಮಹಾವಿದ್ಯಾಲಯದ ಸ್ಥಳವನ್ನು ವಿಶ್ವವಿದ್ಯಾಲಯದ ಅನುಮತಿ ಇಲ್ಲದೆ ಸ್ಥಳಾಂತರಗೊಳಿಸಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯು ಸದರಿ ಮಹಾವಿದ್ಯಾಲಯವು ಅನುಮತಿ ಇಲ್ಲದೆ ಸ್ಥಳಾಂತರಗೊಳಿಸಿದ್ದಕ್ಕಾಗಿ ರೂ. 2 ಲಕ್ಷಗಳನ್ನು ದಂಡವನ್ನು ವಿಧಿಸಲು ಸೂಚಿಸಿತ್ತಾ ಈ ಮಹಾವಿದ್ಯಾಲಯದ ಸ್ಥಳವನ್ನು ಮುಂದುವರೆಸಲು ನಿರ್ದೇಶಿಸಿತು. |
| IV | 2020/01/IV | 2018-19ನೇ ಸಾಲಿನಲ್ಲಿ ಖರ್ಚಾಗಿ ಬಾಕಿ ಉಳಿದ ಎಸ್.ಸಿ.ಪಿ ಅನುದಾನದಲ್ಲಿ ಕ್ರಿಯಾಯೋಜನೆಯ ಪ್ರಕಾರ ಸರಕಾರಕ್ಕೆ ಹೆಚ್ಚುವರಿಯಾಗಿ ಮಂಜೂರಾತಿಗೆ ಕೋರಿದ ಮೊತ್ತವನ್ನು ವಿಶ್ವವಿದ್ಯಾಲಯದಿಂದ **24.10%** ಅನುದಾನದಲ್ಲಿ ಭರಿಸಲು ಹಾಗೂ ಕ್ರಿಯಾಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆಯಲ್ಲಿ ವಿಷಯ ಮಂಡಿಸಿ ಅನುಮೋದನೆ ಪಡೆಯುವ ಕುರಿತು. |
| | ತೀರ್ಮಾನ | **2018-19ನೇ ಸಾಲಿನ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಖರ್ಚಾಗಿ (ಬ್ಯಾಂಕ್ ಬಡ್ಡಿ ಮೊತ್ತವೂ ಸೇರಿ) ಎಸ್‌ಸಿಪಿ ಯೋಜನೆಯಡಿಯಲ್ಲಿ ರೂ. 25,60,000/-ಗಳು ಹಾಗೂ ಟಿಎಸ್‌ಪಿ ಯೋಜನೆಯಡಿ ರೂ. 34,43,000/-ಗಳು ಖರ್ಚಾಗದೇ ಬಾಕಿ ಉಳಿದಿ ಮೊತ್ತಕ್ಕೆ ಹಾಗೂ ಸರಕಾರದಿಂದ ಹೆಚ್ಚುವರಿಯಾಗಿ ಮಂಜೂರಾತಿ ಮಾಡಲು ಎಸ್‌ಸಿಪಿ ಯೋಜನೆಯಡಿಯಲ್ಲಿ ರೂ.73,62,500/-ಗಳ ಕೋರಿಕೆಯೊಂದಿಗೆ ಕ್ರಿಯಾಯೋಜನೆಯನ್ನು ತಯಾರಿಸಿ ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಇಲಾಖೆಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಅನುದಾನ ಮಂಜೂರಾತಿ ಮಾಡಲು ವಿನಂತಿಸಲಾಗಿದ್ದು ಅದರ ಅನುದಾನದ ಮಂಜೂರಾತಿ ತಡವಾಗಿದ್ದು, ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಬಾಕಿ ಉಳಿದ 2018-19ನೇ ಸಾಲಿನ ಅನುದಾನವನ್ನು ಮಾರ್ಚ 31 2020ರ ಒಳಗಾಗಿ ಬಳಸಿಕೊಳ್ಳದೇ ಹೋದಲ್ಲಿ ಸದರಿ ಅನುದಾನವನ್ನು ಸರಕಾರಕ್ಕೆ ಮರಳಿಸಬೇಕಾಗುತ್ತದೆ. ಆದ್ದರಿಂದ ಸರಕಾರದ ಪತ್ರದಂತೆ ವಿಶ್ವವಿದ್ಯಾಲಯದ ಆಂತರಿಕ ಮೂಲದಿಂದ 24.10% ಅನುದಾನವನ್ನು ಎಸ್‌ಸಿಪಿ ಯೋಜನೆಯಡಿಯಲ್ಲಿ ಸರಕಾರಕ್ಕೆ ಹೆಚ್ಚುವರಿ ಮಂಜೂರಾತಿಗೆ ಕೋರಿದ ಮೊತ್ತ ರೂ. 73,62,500/-ಗಳನ್ನು ಭರಿಸಲು ಹಾಗೂ ಸರಕಾರದಿಂದ ಸದರಿ ಹೆಚ್ಚುವರಿ ಮೊತ್ತ ಮಂಜೂರಾದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| V | 2020/01/V | ಶ್ರೀಮತಿ ಯಾಸ್ಮೀನ್ ಬೇಗಂ ನದಾಫ್, ಸಹಾಯಕ ಪ್ರಾಧ್ಯಾಪಕರು ಇವರಿಗೆ Assistant Haj Officer to Jeddah ಹುದ್ದೆಗೆ ಅರ್ಜಿ ಸಲ್ಲಿಸಲು ಸಿಂಡಿಕೇಟ್ ಸಭೆಯ ಅವಗಾಹನೆಗೆ ತರುವ ಕುರಿತು. |
| | ತೀರ್ಮಾನ | **ಶ್ರೀಮತಿ ಯಾಸ್ಮೀನ್ ಬೇಗಂ ನದಾಫ್, ಸಹಾಯಕ ಪ್ರಾಧ್ಯಾಪಕರು ಇವರು Assistant Haj Officer to Jeddah ಹುದ್ದೆಗೆ ಸಲ್ಲಿಸಿದ ಅರ್ಜಿಯನ್ನು ಹಿಂಪಡೆದಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಕೈಬಿಡಲಾಗಿದೆ.** |
| VI | 2020/01/VI | ಏಕರೂಪದ ಭತ್ಯೆ ಕುರಿತ ಸಮಿತಿಯ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | **ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಅಧೀನಕ್ಕೊಳಪಡುವ ಮಹಾವಿದ್ಯಾಲಯಗಳ ಅಧ್ಯಾಪಕರುಗಳಿಗೆ ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿ ಏಕರೂಪ ಭತ್ಯೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಒಂದು ಸಮಿತಿಯನ್ನು ರಚಿಸಿ, ವರದಿಯನ್ನು ಒಪ್ಪಿಸುವಂತೆ ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಪರಿಷತ್‌ನಿಂದ ಅಧಿಸೂಚನೆಯಂತೆ, ಮಾಜಿ ಕುಲಪತಿಗಳಾದ ಪ್ರೊ. ಎಸ್. ಬಿ. ಹೊಸಮನಿಯವರು ಸದರಿ ಸಮಿತಿಯ ಅಧ್ಯಕ್ಷರಾಗಿದ್ದರು. ಈ ಸಮಿತಿಯು ಏಕರೂಪ ಭತ್ಯೆಗಳ ಕುರಿತಂತೆ ಸಮಗ್ರ ವರದಿ ಸಿದ್ಧಪಡಿಸಿ, ಶಿಫಾರಸ್ಸುಗಳನ್ನು ಮಾಡಿದೆ. ಈ ಶಿಫಾರಸ್ಸುಗಳನ್ವಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಪರೀಕ್ಷಾ ಕಾರ್ಯಕ್ಕೆ ಭತ್ಯೆಗಳನ್ನು ಮುಂಬರುವ ಏಪ್ರಿಲ್/ಮೇ 2020ರ ಹಾಗೂ ತದನಂತರ ಪರೀಕ್ಷೆಗಳಿಗೆ ಜಾರಿತರಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| VII | 2020/01/VII | ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವಕ್ಕೆ ಗೌರವ ಡಾಕ್ಟರೇಟ್ ಪದವಿಗೆ ಬಂದಿರುವ ಗಣ್ಯರ ಸ್ವ-ವಿವರಗಳನ್ನು ಪರಿಶೀಲನೆ Scrutiny ಮಾಡಲು Expert Scrutiny Committee ಗೆ ಒರ್ವ ಸದಸ್ಯರನ್ನು ಸೂಚಿಸಿ, ರಾಜಭವನಕ್ಕೆ ಪತ್ರದ ಮೂಲಕ ತಿಳಿಸಲು ಚರ್ಚೆ ಹಾಗೂ ತೀರ್ಮಾನದ ಕುರಿತು. |

| | | |
|---|---|---|
| | ತೀರ್ಮಾನ | ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವಕ್ಕೆ ಘನತೆವೆತ್ತ ರಾಜ್ಯಪಾಲರು Expert Scrutiny Committee ಗೆ ದಾವಣಗೇರೆ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್.ವ್ಹಿ. ಹಲಸೆ ಹಾಗೂ ವ್ಹಿ.ಟಿ.ಯು.ದ ಕುಲಪತಿಗಳಾದ ಡಾ. ಕರಿಸಿದ್ದಪ್ಪ ಇವರುಗಳ ಹೆಸರನ್ನು ಸೂಚಿಸಿದ್ದಾರೆ. ಸಿಂಡಿಕೇಟ್ ಸಭೆಯು ಇವರುಗಳ ಜೊತೆಗೆ Expert Scrutiny Committee ಗೆ ವಿಶ್ವವಿದ್ಯಾಲಯದ ಕಡೆಯಿಂದ ಒಬ್ಬ ನಿವೃತ್ತ ಕುಲಪತಿಗಳು ಈ ಭಾಗಕ್ಕೆ ಸಂಬಂಧಿತರಲ್ಲದವರನ್ನು ನಾಮನಿರ್ದೇಶನ ಮಾಡಬೇಕೆಂದು ತಿಳಿಸಿದರು. ಅದರಂತೆ, ಪ್ರೊ. ಎಚ್.ಎ. ರಂಗನಾಥ, ಮಾಜಿ ನಿರ್ದೇಶಕರು, NAAC, ಹಾಗೂ ಮಾಜಿ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ ಇವರನ್ನು ನಾಮನಿರ್ದೇಶನ ಮಾಡಿತು. |
| VIII | 2020/01/VIII | ಡಿ.ಎಸ್‌ಸಿ ಮತ್ತು ಡಿ.ಲಿಟ್ ಪದವಿ ಬಯಸಿ ವಿಶ್ವವಿದ್ಯಾಲಯಕ್ಕೆ ಮಹಾಪ್ರಬಂಧ ಸಲ್ಲಿಸಿರುವ ಕೆಲವೊಂದು ಅಭ್ಯರ್ಥಿಗಳ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆಗದಿರುವ ಕಾರಣ ಸದರಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ, ಅವರು ಭರಿಸಿರುವ ಶುಲ್ಕವನ್ನು ಮರಳಿ ನೀಡುವ ಕುರಿತು. |
| | ತೀರ್ಮಾನ | ಡಿ.ಎಸ್‌ಸಿ ಮತ್ತು ಡಿ.ಲಿಟ್ ಪದವಿ ಬಯಸಿ ವಿಶ್ವವಿದ್ಯಾಲಯಕ್ಕೆ ಮಹಾಪ್ರಬಂಧ ಸಲ್ಲಿಸಿರುವ ಕೆಲವೊಂದು ಅಭ್ಯರ್ಥಿಗಳ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆಗದಿರುವ ಕಾರಣ ಸದರಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಹಾಗೂ ಅವರು ಭರಿಸಿರುವ ಶುಲ್ಕವನ್ನು ಮರಳಿ ನೀಡಲು ಸಭೆಯು ಅನುಮೋದನೆ ನೀಡಿತು. |
| XI | 2020/01/XI | ವಿದ್ಯಾರ್ಥಿಗಳು ವಿನಾಯಿತಿ ಪಡೆದಿರುವ ಪರೀಕ್ಷಾ ಶುಲ್ಕಗಳ ಮೊತ್ತವನ್ನು ಆಯಾ ಮಹಾವಿದ್ಯಾಲಯಗಳಿಂದ ವಿಶ್ವವಿದ್ಯಾಲಯಕ್ಕೆ ಭರಿಸಿಕೊಳ್ಳಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು. |
| | ತೀರ್ಮಾನ | ವಿವಿಧ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿ ವಿಶ್ವವಿದ್ಯಾಲಯವು ಅರ್ಹ ವಿದ್ಯಾರ್ಥಿಗಳಿಗೆ ಸರಕಾರದ ನಿಯಮಾನುಸಾರ ವಿನಾಯಿತಿಯನ್ನು ಒದಗಿಸುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಸರಕಾರದಿಂದ ಶಿಷ್ಯವೇತನಗಳನ್ನು ಸ್ವೀಕರಿಸಿದ ನಂತರ ಮಹಾವಿದ್ಯಾಲಯದವರು ಸದರಿ ವಿನಾಯಿತಿ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಭರಿಸಬೇಕಾಗಿರುತ್ತದೆ. ಈ ಶಿಷ್ಯವೇತನದ ಮೊತ್ತವು ಸರಕಾರದಿಂದ ಆಯಾ ವಿದ್ಯಾರ್ಥಿಗಳ ಬ್ಯಾಂಕ ಖಾತೆಗೆ ಇಲ್ಲವೇ ಆಯಾ ವಿದ್ಯಾರ್ಥಿಗಳ ಮಹಾವಿದ್ಯಾಲಯದ ಬ್ಯಾಂಕ ಖಾತೆಗೆ ಜಮೆಯಾಗುತ್ತದೆ. ಮುಂದುವರೆದು, ಸದರಿ ಮಹಾವಿದ್ಯಾಲಯಗಳು ಪರೀಕ್ಷಾ ಶುಲ್ಕಗಳ ಮೊತ್ತಗಳನ್ನು ವಿಶ್ವವಿದ್ಯಾಲಯಕ್ಕೆ ಭರಣಮಾಡಿರುವುದಿಲ್ಲ. ಸದರಿ ಶುಲ್ಕಗಳ ಮೊತ್ತವನ್ನು ಆಯಾ ಮಹಾವಿದ್ಯಾಲಯಗಳಿಂದ ವಿಶ್ವವಿದ್ಯಾಲಯಕ್ಕೆ ಭರಿಸಿಕೊಳ್ಳಲು ಓರ್ವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಓರ್ವ ಸಿಂಡಿಕೇಟ್ ಸದಸ್ಯರನೊಳಗೊಂಡ ಹದಿಮೂರು ಸಮಿತಿಗಳನ್ನು ರಚಿಸಿ ಸೂಕ್ತ ಕ್ರಮಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |
| X | 2020/01/X | ವಿವಿಧ ಪದವಿ ಪರೀಕ್ಷೆಗಳನ್ನ ನಡೆಸುವ ಪದ್ದತಿಯಲ್ಲಿ ಸುಧಾರಣೆ (Examination Reforms) ತರುವ ದೃಷ್ಟಿಯಿಂದ ಹೊಸ ನೀತಿಗಳನ್ನು ಅಳವಡಿಸಿಕೊಳ್ಳುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಪದವಿ ಪರೀಕ್ಷೆಗಳನ್ನು 2010 ರಿಂದ ಇದುವರೆಗೆ ಒಂದೇ ಮಾದರಿಯಲ್ಲಿ ನಡೆಸಲಾಗುತ್ತಿದೆ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯಿಂದ ಹೊಸ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಹಾಗೂ ಯು.ಜಿ.ಸಿ. ಮಾರ್ಗದರ್ಶನದ ಪ್ರಕಾರ ವಿಶ್ವವಿದ್ಯಾಲಯದಲ್ಲಿ CBCS ಪಠ್ಯಕ್ರಮ ಪರಿಷ್ಕರಣೆ ಮಾಡಲಾಗುತ್ತಿದೆ. ಆದ್ದರಿಂದ, ಪರೀಕ್ಷಾ ಗುಣಮಟ್ಟ, ಮೌಲ್ಯ ಹಾಗೂ ವಿದ್ಯಾರ್ಥಿಗಳ ಕೌಶಲ್ಯಮಟ್ಟಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಹೊಸ ಪರೀಕ್ಷಾ ಪರಿನಿಯಮ, ವಿನಿಯಮಗಳನ್ನು ರಚಿಸಿ ಮುಂದಿನ ವರ್ಷಗಳಿಗೆ ಅಳವಡಿಸಿಕೊಳ್ಳಬಹುದಾದ ತಾಂತ್ರಿಕ ದಾರಿ–ನಕ್ಷೆಗಳನ್ನು (Strategic Road Map) ರೂಪಿಸಿ, ಅದನ್ನು ಕಾರ್ಯರೂಪಕ್ಕೆ ತರಲು ಅವಶ್ಯಕವಿರುವ ಪರಿನಿಯಮ/ನಿಯಮಾವಳಿಗಳು/ ಮಾರ್ಗಸೂಚಿಗಳನ್ನು ರಚಿಸುವುದ್ದಕ್ಕಾಗಿ ಸಭೆಯು ಅನುಮೋದನೆ ನೀಡಿತು. |
| XI | 2020/01/XI | RCUTA ಪಧಾಧಿಕಾರಿಗಳ ಮನವಿ ಮೇರೆಗೆ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಈಗಾಗಲೇ ಜಾರಿಯಲ್ಲಿರುವಂತೆ, ವಿದ್ಯಾರ್ಥಿಯು 5ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಅನುತ್ತೀರ್ಣ ವಿಷಯಗಳನ್ನು 6ನೇ ಸೆಮಿಸ್ಟರ್‌ನ ಪರೀಕ್ಷೆಯೊಂದಿಗೆ 5ನೇ ಸೆಮಿಸ್ಟರ್ ಪರೀಕ್ಷೆಯನ್ನು ಬರೆಯಲು ಅವಕಾಶ ಮಾಡಿಕೊಡುವಂತೆ ಸಭೆಯು ತೀರ್ಮಾನಿಸಿತು. |
| XII | 2020/01/XII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ತಮ್ಮ ಜ್ಞಾನ ಹಾಗೂ ಅನುಭವವನ್ನು ಹೆಚ್ಚಿಸುವ ದೃಷ್ಟಿಯಿಂದ ವಿವಿಧ ವಿಭಾಗಗಳ ಬೋಧಕ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವಂತೆ ಸಭೆಯು ಸೂಚಿಸಿತು. |

ಬಿ.ಇಡಿ.Cluster ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಪ್ರೊ. ಸಿ.ಎಂ. ತ್ಯಾಗರಾಜ, ಹಾಗೂ ಪ್ರೊ. ವ್ಹಿ.ಎಸ್. ಚಟಪಲ್ಲಿ ಅವರ ತಂಡಕ್ಕೆ ಸಿಂಡಿಕೇಟ್ ಸಭೆಯು ಶುಭಾಶಯಗಳನ್ನು ತಿಳಿಸಿತು.

ಕೊನೆಯದಾಗಿ ಕುಲಸಚಿವರು(ಮೌ) ಇವರು ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.